# ಘಟಕ ಪರೀಕ್ಷೆಗಳು

# 2023–24

## ಪ್ರಥಮ ಭಾಷೆ ಸಿರಿ ಕನ್ನಡ

10

ಬಸವರಾಜ ಟಿ.ಎಂ
ಕನ್ನಡ ಭಾಷಾ ಶಿಕ್ಷಕರು
ಬಾಲಕಿಯರ ಸರ್ಕಾರಿ ಪ್ರೌಢಶಾಲೆ,
ಹರಪನಹಳ್ಳಿ, ವಿಜಯನಗರ ಜಿಲ್ಲೆ

# ಪ್ರಥಮ ಭಾಷೆ ಕನ್ನಡ
## ಘಟಕ ಪರೀಕ್ಷೆ

**ಗದ್ಯ – ೨. ಶಬರಿ** **ಅಂಕಗಳು –೨೦**

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **೧*೪=೪**

೧. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು ?

೨. ಮತಂಗಾಶ್ರಕ್ಕೆ ಆಗಮಿಸಿದ ದಶರಥ ಪುತ್ರರು ಯಾರು ಯಾರು?

೩. ಸೀತೆಗೆ ಭೂಮಿಜಾತೆ ಎಂದು ಏಕೆ ಕರೆಯಲಾಗುತ್ತದೆ ?

೪. ಶ್ರೀರಾಮನ ತಂದೆಯ ಹೆಸರೇನು ?

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **೨*೩=೬**

೫. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು ?

೬. ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ಬಗೆ ಹೇಗಿತ್ತು?

೭. ಆತಿಥ್ಯ ಸ್ವೀಕರಿಸಿದ ರಾಮ ಶಬರಿಗೆ ಏನು ಹೇಳಿದನು ?

**ಇ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.** **೩*೧=೩**

**೮.** “ನಾಚುತಿಹೆನೀ ಪೂಜ್ಯೆಯೀ ನಲುಮೆಯಿಂದ.”

**ಈ) ಕೆಳಗಿನ ಕವಿಯ ಸ್ಥಳ, ಕಾಲ, ಕೃತಿ, ಪ್ರಶಸ್ತಿಗಳನ್ನು ಕುರಿತು ಬರೆಯಿರಿ .** **೩*೧=೩**

೯. ಪು.ತಿ.ನರಸಿಂಹಚಾರ್ಯರು

**ಉ) ಈ ಕೆಳಗಿನ ಪ್ರಶ್ನೆಗೆಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **೪*೧=೪**

**೧೦.** ಶಬರಿಯ ಚಿಂತೆ ಹಿಂಗಿ ಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

## ಪ್ರಥಮ ಭಾಷೆ ಕನ್ನಡ
## ಘಟಕ ಪರೀಕ್ಷೆ

**ಗದ್ಯ – ೨. ಲಂಡನ್ ನಗರ** **ಅಂಕಗಳು –೨೦**

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **೧*೪=೪**

೧. ಲಂಡನ್ನಿನ ರಸ್ತೆಗಳಲ್ಲಿ ಟ್ರಾಮ್ ಬಸ್ಸುಗಳು ಬಹಳ ಹೊತ್ತು ನಡು ನಡುವೆ ನಿಲ್ಲುವುದನ್ನು ತಪ್ಪಿಸಲು ಮಾಡಿರುವ ವ್ಯವಸ್ಥೆಯೇನು?

೨. ನೆಲ್ಸನ್‌ರವರ ಮೂರ್ತಿಯಿರುವ ಸ್ಥಳದ ಹೆಸರೇನು?

೩. 'ವೆಸ್ಟ್ ಮಿನ್‌ಸ್ಟರ್ ಅಬೆ' ಯಾರ ಸ್ಮಾರಕವಾಗಿದೆ?

೪. ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ ಯಾವುದು?

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **೨*೩=೬**

೫. ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು?

೬. ಲಂಡನ್ನಿನ ಹೆಣ್ಣು ಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ?

೭. ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ?

**ಇ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.** **೩*೧=೩**

೮. "ನಿಮ್ಮ ದೇಶದ ಗೌರವವನ್ನು ಕಾಯಿರಿ! ಇದು ದೊಡ್ಡದಾದ ರಾಷ್ಟ್ರ "

**ಈ) ಕೆಳಗಿನ ಕವಿಯ ಸ್ಥಳ, ಕಾಲ, ಕೃತಿ, ಪ್ರಶಸ್ತಿಗಳನ್ನು ಕುರಿತು ಬರೆಯಿರಿ .** **೩*೧=೩**

೯. ವಿ.ಕೃ.ಗೋಕಾಕ್

**ಉ) ಈ ಕೆಳಗಿನ ಪ್ರಶ್ನೆಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **೪*೧=೪**

೧೦. 'ವೆಸ್ಟ್ ಮಿನ್‌ಸ್ಟರ್ ಅಬೆ' ಪ್ರಾರ್ಥನಾ ಮಂದಿರ ಒಂದು ವಿಶೇಷ ಸ್ಮಾರಕ ವಿವರಿಸಿ.

# ಪ್ರಥಮ ಭಾಷೆ ಕನ್ನಡ
# ಘಟಕ ಪರೀಕ್ಷೆ

## ಗದ್ಯ – ೦೩. ಶುಕನಾಸನ ಉಪದೇಶ ಅಂಕಗಳು –೨೦

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** ೧*೪=೪

೧. ಹಿತವಚನವು ಮನಸ್ಸಿನ ಕೊಳೆಯನ್ನು ಹೇಗೆ ತೊಳೆಯುತ್ತದೆ?

೨. ಯಾರ ಕಿವಿಗೆ ಉಪದೇಶ ನಾಟುವುದಿಲ್ಲ?

೩. ಯಾರ್‍ಯಾರನ್ನು ಕಂಡರೆ ಸಂಪತ್ತಿಗೆ ಆಗಿಬರುವುದಿಲ್ಲ?

೪. ದರ್ಭೆಯ ಚಿಗುರು ಯಾವ ಗುಣವನ್ನು ಒರೆಸಿಬಿಡುತ್ತದೆ?

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** ೨*೩=೬

೫. ಗುರೂಪದೇಶದ ಗುಣಗಳನ್ನು ಪಟ್ಟಿಮಾಡಿ.

೬. ಸಂಪತ್ತನ್ನು ಕಾಪಾಡಲು ಎದುರಾಗುವ ಕಷ್ಟಗಳೇನು?

೭. ಸಿರಿಯು ರಾಜರಿಗೆ ಒಲಿದರೆ ಏನೇನು ಅನಾಹುತಗಳಾಗುತ್ತವೆ?

**ಇ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.** ೩*೧=೩

೮. "ಗುರೂಪದೇಶ ಎಂದರೆ ತಲೆ ನೆರೆಯದೆ ಬರುವ ಮುಪ್ಪು."

**ಈ) ಕೆಳಗಿನ ಕವಿಯ ಸ್ಥಳ, ಕಾಲ, ಕೃತಿ, ಪ್ರಶಸ್ತಿಗಳನ್ನು ಕುರಿತು ಬರೆಯಿರಿ** ೩*೧=೩

೯. ಡಾ.ಬನ್ನಂಜೆ ಗೋವಿಂದಾಚಾರ್ಯರು

**ಉ) ಈ ಕೆಳಗಿನ ಪ್ರಶ್ನೆಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ** ೪*೧=೪

೧೦. ಗುರೂಪದೇಶವನ್ನು ಯಾರ್‍ಯಾರು ಹೇಗೆ ಸ್ವೀಕರಿಸುತ್ತಾರೆ.

# ಪ್ರಥಮ ಭಾಷೆ ಕನ್ನಡ
## ಘಟಕ ಪರೀಕ್ಷೆ

**ಗದ್ಯ – ೦೪. ಭಾಗ್ಯಶಿಲ್ಪಿಗಳು** **ಅಂಕಗಳು –೨೦**

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **೧*೪=೪**

೧. ನಾಲ್ವಡಿ ಕೃಷ್ಣರಾಜ ಒಡೆಯರು ಯಾವಾಗ ಪಟ್ಟಾಭಿಷಿಕ್ತರಾದರು?

೨. ಏಷ್ಯಾ ಖಂಡದಲ್ಲಿಯೇ ಮೊದಲು ಪ್ರಾರಂಭಿಸಿದ ಜಲ ವಿದ್ಯುತ್ ಯೋಜನೆ ಯಾವುದು?

೩. ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು?

೪. ಯಾರ ಹುಟ್ಟು ಹಬ್ಬದ ನೆನಪಿಗಾಗಿ 'ಎಂಜಿನಿಯರ್ಸ್ ದಿನಾಚರಣೆ' ಯನ್ನು ಆಚರಿಸಲಾಗುತ್ತದೆ ?

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **೨*೩=೬**

೫. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು?

೬. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ?

**೭.** ನೆಹರೂ ಅವರು ಸರ್ ಎಂ. ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದ್ದಾರೆ?

**ಇ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.** **೩*೧=೩**

೮. "ಮೈಸೂರು ಸಂಸ್ಥಾನಕ್ಕೆ 'ಮಾದರಿ ಮೈಸೂರು' ಎಂಬ ಕೀರ್ತಿ ಪ್ರಾಪ್ತವಾಯಿತು."

**ಈ) ಕೆಳಗಿನ ಕವಿಯ ಸ್ಥಳ, ಕಾಲ, ಕೃತಿ, ಪ್ರಶಸ್ತಿಗಳನ್ನು ಕುರಿತು ಬರೆಯಿರಿ** **೩*೧=೩**

೯. ಡಿ.ಎಸ್. ಜಯಪ್ಪಗೌಡ

**ಉ) ಈ ಕೆಳಗಿನ ಪ್ರಶ್ನೆಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **೪*೧=೪**

**೧೦.** ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

## ಪ್ರಥಮ ಭಾಷೆ ಕನ್ನಡ
## ಘಟಕ ಪರೀಕ್ಷೆ

**ಗದ್ಯ – ೫. ಸುಕುಮಾರಸ್ವಾಮಿ ಕಥೆ** **ಅಂಕಗಳು –೨೦**

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** ೧*೪=೪

೧. ಸುಕುಮಾರಸ್ವಾಮಿಯ ತಂದೆತಾಯಿಗಳ ಹೆಸರೇನು?

೨. ಸುಕುಮಾರಸ್ವಾಮಿಗೆ ಯಾವ ಪಟ್ಟವನ್ನು ಕಟ್ಟಲಾಯಿತು?

೩. ಯಶೋಭದ್ರೆಯು ರತ್ನ ಕಂಬಳಿಗಳನ್ನು ಯಾರಿಗೆ ಕೊಟ್ಟಳು?

೪. ಸುಕುಮಾರಸ್ವಾಮಿ ಅರ್ಧಾಹಾರವನ್ನು ಏಕೆ ಉಗುಳುತ್ತಿದ್ದನು?

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** ೨*೩=೬

೫. ಸುಕುಮಾರಸ್ವಾಮಿಯು ಹೇಗೆ ಸುಖಭೋಗಗಳನ್ನು ಅನುಭವಿಸುತ್ತಿದ್ದನು?

೬. ಅರಸ ವೃಷಭಾಂಕನು ಆಶ್ಚರ್ಯಗೊಳ್ಳಲು ಕಾರಣವೇನು?

೭. ವೃಷಭಾಂಕ ಅರಸನು ಯಶೋಭದ್ರೆಯ ಅರಮನೆಗೆ ಬರಲು ಕಾರಣವೇನು ?

**ಇ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.** ೩*೧=೩

೮. “ನಮ್ಮನಾಳ್ವರುಮೊಳರೆ ಎಂದು ವಿಸ್ಮಯಂಬಟ್ಟು”

ಉ) **ಕೆಳಗಿನ ಕವಿಯ ಸ್ಥಳ, ಕಾಲ, ಕೃತಿ, ಪ್ರಶಸ್ತಿಗಳನ್ನು ಕುರಿತು ಬರೆಯಿರಿ** ೩*೧=೩

೯. ಶಿವಕೋಟ್ಯಾಚಾರ್ಯ

**ಊ) ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** ೪*೧=೪

೧೦. ಸುಕುಮಾರಸ್ವಾಮಿಯ ಕಥೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

# ಪ್ರಥಮ ಭಾಷೆ ಕನ್ನಡ
## ಘಟಕ ಪರೀಕ್ಷೆ

**ಗದ್ಯ – ೬. ಯುದ್ಧ** **ಅಂಕಗಳು –೨೦**

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **೧*೪=೪**

೧. ರಾಹಿಲನು ಯಾರು?

೨. ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು?

೩. ರಾಹಿಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು ಯಾವುದು?

೪. ಯುದ್ಧದ ಬಗೆಗೆ ಮುದುಕಿಯು ಏನೆಂದು ಗೊಣಗಿಕೊಂಡು ಬಾಗಿಲು ತೆರೆದಳು?

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **೨*೩=೬**

೫. ಡಾಕ್ಟರ್‌ಗೆ ವಿಮಾನದ ಪೈಲಟ್ ಏನು ಹೇಳಿದನು?

೬. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?

೭. ಮುದುಕಿ ಸೈನಿಕರಿಂದ ರಾಹಿಲನನ್ನು ಹೇಗೆ ರಕ್ಷಿಸಿದಳು ?

**ಇ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.** **೩*೧=೩**

೮. "ದಯವಿಟ್ಟು ಬಾಗಿಲು ತೆಗೆಯಿರಿ ನಾನು ಗಾಯಗೊಂಡಿದ್ದೇನೆ"

**ಉ) ಕೆಳಗಿನ ಕವಿಯ ಸ್ಥಳ, ಕಾಲ, ಕೃತಿ, ಪ್ರಶಸ್ತಿಗಳನ್ನು ಕುರಿತು ಬರೆಯಿರಿ** **೩*೧=೩**

೯. ಸಾರಾ ಅಬೂಬಕ್ಕರ್

**ಊ) ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** **೪*೧=೪**

೧೦. ರಾಹಿಲನು ಮುದುಕಿಯ ಕುಟುಂಬಕ್ಕೂ, ಮುದುಕಿಯು ರಾಹಿಲನಿಗೂ ಮಾಡಿದ ಸಹಾಯವನ್ನು ಸಂಕ್ಷಿಪ್ತವಾಗಿ ವಿವರಿಸಿ.

# ಪ್ರಥಮ ಭಾಷೆ ಕನ್ನಡ
# ಘಟಕ ಪರೀಕ್ಷೆ

## ಗದ್ಯ – ೦೭. ವೃಕ್ಷಸಾಕ್ಷಿ ಅಂಕಗಳು –೨೦

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **೧*೪=೪**

೧. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು?

೨. ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು?

೩. ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಏಕೆ ಬಂದರು?

೪. ದುಷ್ಟಬುದ್ದಿಯ ದುಷ್ಕೃತ್ಯದಲ್ಲಿ ಭಾಗಿಯಾದವರು ಯಾರು ?

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **೨*೩=೬**

೫. ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನೆಂದು ಹೇಳಿದನು?

೬. ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು?

೭. ಧರ್ಮಾಧೀಕರಣರು ವೃಕ್ಷವನ್ನು ಸಾಕ್ಷಿಯಾಗಿ ಒಪ್ಪಿಕೊಳ್ಳುವಂತೆ ಧರ್ಮಬುದ್ಧಿಗೆ ಹೇಗೆ ಮನವೊಲಿಸಿದರು ?

**ಇ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.** **೩*೧=೩**

೮. "ಪೊನ್ನನೆಲ್ಲಮಂ ನೀನೆ ಕೊಂಡೆ"

**ಈ) ಕೆಳಗಿನ ಕವಿಯ ಸ್ಥಳ, ಕಾಲ, ಕೃತಿ, ಪ್ರಶಸ್ತಿಗಳನ್ನು ಕುರಿತು ಬರೆಯಿರಿ** **೩*೧=೩**

೯. ದುರ್ಗಸಿಂಹ

**ಉ) ಈ ಕೆಳಗಿನ ಪ್ರಶ್ನೆಗೆಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **೪*೧=೪**

೧೦. ದುಷ್ಟಬುದ್ಧಿಯತಂತ್ರ ಅವನಿಗೆ ತಿರುಗುಬಾಣವಾದ ಬಗೆಯನ್ನು ತಿಳಿಸಿ.

# ಪ್ರಥಮ ಭಾಷೆ ಕನ್ನಡ
## ಘಟಕ ಪರೀಕ್ಷೆ

**ಪದ್ಯ – ೦೧. ಸಂಕಲ್ಪಗೀತೆ** **ಅಂಕಗಳು –೨೦**

**ಅ)ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **೧*೨=೨**

೧. ಯಾವುದನ್ನು ಎಚ್ಚರದಲ್ಲಿ ಮುನ್ನಡೆಸಬೇಕು ಎಂದು ಕವಿ ಜಿ.ಎಸ್. ಶಿವರುದ್ರಪ್ಪನವರು ಹೇಳಿದ್ದಾರೆ ?

೨. ಕವಿ ಜಿ.ಎಸ್. ಶಿವರುದ್ರಪ್ಪನವರು ಹೇಳುವಂತೆ ಕಾಡು ಮೇಡುಗಳ ಸ್ಥಿತಿ ಹೇಗಿದೆ?

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **೨*೨=೪**

೩. ಸಂಕಲ್ಪಗೀತೆಯ ಆಶಯ ಭಾವವೇನು?

೪. ಮನುಜ ಮನುಜರ ನಡುವೆ ಸೇತುವೆಯಾಗಬೇಕು ಯಾಕೆ?

**ಇ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.** **೩*೧=೩**

೫. "ಹೊಸ ಎಚ್ಚರದೊಳು ಬದುಕೋಣ"

**ಈ) ಕೆಳಗಿನ ಕವಿಯ ಸ್ಥಳ, ಕಾಲ, ಕೃತಿ, ಪ್ರಶಸ್ತಿಗಳನ್ನು ಕುರಿತು ಬರೆಯಿರಿ** **೩*೧=೩**

೬. ಜಿ.ಎಸ್.ಶಿವರುದ್ರಪ್ಪನವರು

**ಉ) ಕೆಳಗಿನ ಪದ್ಯವನ್ನು ಪೂರ್ಣಗೊಳಿಸಿ ಬರೆಯಿರಿ** **೪*೧=೪**

**೭. ಮತಗಳೆಲ್ಲವೂ ______________________**
**______________________**
**______________________**
**______________________ಬಿತ್ತೋಣ.**

**ಊ) ಈ ಕೆಳಗಿನ ಪದ್ಯದ ಮೌಲ್ಯಾಧಾರಿತ ಸಾರಾಂಶವನ್ನು ಬರೆಯಿರಿ** **೪*೧=೪**

**೮. ಕಲುಷಿತವಾದೀ ನದೀಜಲಗಳಿಗೆ**
**ಮುಂಗಾರಿನ ಮಳೆಯಾಗೋಣ**
**ಬರಡಾಗಿರುವೀ ಕಾಡುಮೇಡುಗಳ**
**ವಸಂತವಾಗುತ ಮುಟ್ಟೋಣ....**

# ಪ್ರಥಮ ಭಾಷೆ ಕನ್ನಡ
# ಘಟಕ ಪರೀಕ್ಷೆ

## ಪದ್ಯ – ೦೨. ಹಕ್ಕಿ ಹಾರುತಿದೆ ನೋಡಿದಿರಾ　　　　ಅಂಕಗಳು –೨೦

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **೧*೨=೨**

೧. ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ ?

೨. ಹಕ್ಕಿಯ ಕಣ್ಣುಗಳು ಯಾವುವು ?

**ಆ) ಬಿಟ್ಟ ಸ್ಥಳವನ್ನು ಸೂಕ್ತವಾದ ಉತ್ತರಗಳಿಂದ ತುಂಬಿರಿ** **೧*೨=೨**

೩. ಗಾವುದ ಗಾವುದ ಗಾವುದ ಮುಂದೆ ____________ ಹೊತ್ತಿನ ಒಳಗೆ ಹಕ್ಕಿ ಹಾರುತಿದೆ ನೋಡಿದಿರಾ !.

೪. ಬೆಳ್ಳಿಯ ಹಳ್ಳಿಯ ಮೇರೆಯ ಮೀರಿ ____________________ನೀರನು ಹೀರಿ.

**ಇ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **೨*೧=೨**

೫. ಬೇಂದ್ರೆಯವರು ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ ?

**ಈ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.** **೩*೧=೩**

೬. ಹೊಸಗಾಲದ ಹಸುಮಕ್ಕಳ ಹರಸಿ

**ಉ) ಕೆಳಗಿನ ಕವಿಯ ಸ್ಥಳ, ಕಾಲ, ಕೃತಿ, ಪ್ರಶಸ್ತಿಗಳನ್ನು ಕುರಿತು ಬರೆಯಿರಿ** **೩*೧=೩**

೭. ದ.ರಾ.ಬೇಂದ್ರೆ

**ಊ) ಕೆಳಗಿನ ಪದ್ಯವನ್ನು ಪೂರ್ಣಗೊಳಿಸಿ ಬರೆಯಿರಿ** **೪*೧=೪**

| |
|---|
| ೮. ನೀಲ ಮೇಘ ಮಂಡಲ |
| |
| |
| |
| ಹಕ್ಕಿ ಹಾರುತಿದೆ ನೋಡಿದಿರಾ ! |

**ಋ) ಈ ಕೆಳಗಿನ ಪದ್ಯದ ಮೌಲ್ಯಾಧಾರಿತ ಸಾರಾಂಶವನ್ನು ಬರೆಯಿರಿ** **೪*೧=೪**

೯. ರಾಜ್ಯದ ಸಾಮ್ರಾಜ್ಯದತೆನೆ ಒಕ್ಕಿ
ಮಂಡಲಗಿಂಡಲಗಳ ಗಡ ಮುಕ್ಕಿ
ತೇಲಿಸಿ ಮುಳುಗಿಸಿ ಖಂಡ ಖಂಡಗಳ
ಸಾರ್ವಭೌಮರ ನೆತ್ತಿಯ ಕುಕ್ಕಿ
ಹಕ್ಕಿ ಹಾರುತಿದೆ ನೋಡಿದಿರಾ

**ಪ್ರಥಮ ಭಾಷೆ ಕನ್ನಡ**
**ಘಟಕ ಪರೀಕ್ಷೆ**

**ಪದ್ಯ – ೦೩. ಹಲಗಲಿ ಬೇಡರು** **ಅಂಕಗಳು –೨೦**

**ಅ)ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **೧*೨=೨**

೧. ಕುಂಪಣಿ ಸರಕಾರ ಹೊರಡಿಸಿದ ಆದೇಶ ಏನು?

೨. ಹಲಗಲಿಯ ನಾಲ್ವರು ಪ್ರಮುಖರುಯಾರು?

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **೨*೨=೪**

೩. ಹಲಗಲಿಯ ಬೇಡರುದಂಗೆ ಏಳಲು ಕಾರಣವೇನು?

೪. ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ?

**ಇ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.** **೩*೨=೬**

೫. "ಹೊಡೆದರೊಗುಂಡ ಕರುಣ ಇಲ್ಲದ್ಹಂಗ"

೬. "ಜೀವ ಸತ್ತು ಹೋಗುವುದುಗೊತ್ತ"

**ಈ) ಕೆಳಗಿನ ಪದ್ಯವನ್ನು ಪೂರ್ಣಗೊಳಿಸಿ ಬರೆಯಿರಿ** **೪*೧=೪**

**೭. ಕೊಡಲಿ ______________________**

**________________________________**

**________________________________**

**__________________________ನಾನೆಷ್ಟಾ**

**ಉ) ಈ ಕೆಳಗಿನ ಪದ್ಯದ ಮೌಲ್ಯಾಧಾರಿತ ಸಾರಾಂಶವನ್ನು ಬರೆಯಿರಿ** **೪*೧=೪**

**೮.** ಬೆನ್ನಬೆನ್ಹತ್ತಿತಿರಿತಿರ್ವಿಕಡಿದರೊ ಏನು ಉಳಿಯದ್ಹಂಗ
ನಡುವೆ ಹಾಕ್ಕೊಂಡು ಹೊಡದರೊಗುಂಡಕರುಣ ಇಲ್ಲದ್ಹಂಗ
ಚಟೆಕಾರರು ಚೌಕಿ ಮಾಡುತ, ನಡಿದರೊ ಹೇಳದೆ ಗುಡದಾಗ
ಅಗಸಿಗೆ ಬಂದು 'ಹೆಬಲಕ' ಸಾಬ ಹೇಳತಾನ ಬುದ್ಧಿಮಾತ
ಕೊಡುತಿವಿ ಕಬುಲ ಕೇಳರಿ ಮಾತ, ಹೋಗಬ್ಯಾಡರಿ ಸತ್ತ
ಅನುವ ಮಾತಿಗೆ ನಂಬಿಗೆ ಸಾಲದೆ 'ಹನುಮ' ಬಂದನೊ ಮುಂದಿತ್ತ

# ಪ್ರಥಮ ಭಾಷೆ ಕನ್ನಡ
## ಘಟಕ ಪರೀಕ್ಷೆ

**ಪದ್ಯ – ೦೪. ಕೌರವೇಂದ್ರನ ಕೊಂದೆ ನೀನು** **ಅಂಕಗಳು –೨೦**

**ಅ)ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **೧*೨=೨**

೧. ಶ್ರೀಕೃಷ್ಣನು ಕರ್ಣನನ್ನು ರಥದಲ್ಲಿ ಹೇಗೆ ಕೂರಿಸಿಕೊಂಡನು?

೨. ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು?

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **೨*೨=೪**

೩. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು?

೪. ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದುಕರ್ಣ ಹೇಳಲು ಕಾರಣವೇನು?

**ಇ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.** **೩*೧=೩**

೫. “ನಿನ್ನಪದೆಸೆಯ ಬಯಸುವನಲ್ಲ”

**ಈ) ಕೆಳಗಿನ ಕವಿಯ ಸ್ಥಳ, ಕಾಲ, ಕೃತಿ, ಬಿರುದುಗಳನ್ನು ಕುರಿತು ಬರೆಯಿರಿ** **೩*೧=೩**

೬. ಕುಮಾರವ್ಯಾಸ

**ಉ) ಕೆಳಗಿನ ಪದ್ಯವನ್ನು ಪೂರ್ಣಗೊಳಿಸಿ ಬರೆಯಿರಿ** **೪*೧=೪**

**೭.** ಕೊರಳಸೆರೆ ಹಿಗ್ಗಿದವು ದೃಗುಜಲ

______________________

______________________

______________________

______________________

ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ

**ಊ) ಈ ಕೆಳಗಿನ ಪದ್ಯದ ಮೌಲ್ಯಾಧಾರಿತ ಸಾರಾಂಶವನ್ನು ಬರೆಯಿರಿ** **೪*೧=೪**

**೮.** ಭೇದವಿಲ್ಲೆಲೆಕರ್ಣ ನಿಮ್ಮೊಳು
ಯಾದವರು ಕೌರವರೊಳಗೆ ಸಂ
ವಾದಿಸುವಡನ್ವಯಕೆ ಮೊದಲೆರಡಿಲ್ಲ ನಿನ್ನಾಣೆ
ಮೇದಿನೀಪತಿ ನೀನು ಚಿತ್ತದೊ
ಳಾದುದರಿವಿಲ್ಲೆನುತ ದಾನವ
ಸೂದನನುರವಿಸುತನಕಿವಿಯಲಿ ಬಿತ್ತಿದನು ಭಯವ

# ಪ್ರಥಮ ಭಾಷೆ ಕನ್ನಡ
## ಘಟಕ ಪರೀಕ್ಷೆ

**ಪದ್ಯ – ೦೫. ಹಸುರು** **ಅಂಕಗಳು –೨೦**

**ಅ)ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **೧*೨=೨**

೧. ಆಶ್ವಯುಜದ ಬತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ?

೨. ಕವಿಗೆ ಹುಲ್ಲಿನ ಹಾಸು ಯಾವರೀತಿಕಂಡಿದೆ?

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **೨*೨=೪**

೩. ಹಸುರು ಸಕಲೇಂದ್ರಿಯಗಳನ್ನು ವ್ಯಾಪಿಸಿದೆ ಎಂಬುದನ್ನು ಕವಿಯು ಹೇಗೆ ವರ್ಣಿಸಿದ್ದಾರೆ?

೪. ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳೇನು?

**ಇ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.** **೩*೧=೩**

೫. “ಬೇರೆ ಬಣ್ಣವನೆ ಕಾಣೆ”

**ಈ) ಕೆಳಗಿನ ಕವಿಯ ಸ್ಥಳ, ಕಾಲ, ಕೃತಿ, ಪ್ರಶಸ್ತಿಗಳನ್ನು ಕುರಿತು ಬರೆಯಿರಿ** **೩*೧=೩**

೬. ಕುವೆಂಪು

**ಉ) ಕೆಳಗಿನ ಪದ್ಯವನ್ನು ಪೂರ್ಣಗೊಳಿಸಿ ಬರೆಯಿರಿ** **೪*೧=೪**

**೭. ಹಸುರಾಗಸ ________________________**

**____________________________________**

**___________________________________**

**______________________________ಬಿಸಿಲು**

**ಊ) ಈ ಕೆಳಗಿನ ಪದ್ಯದ ಮೌಲ್ಯಾಧಾರಿತ ಸಾರಾಂಶವನ್ನು ಬರೆಯಿರಿ** **೪*೧=೪**

೮. ಹಸುರಾಗಸ; ಹಸುರು ಮುಗಿಲು;
ಹಸುರುಗದ್ದೆಯಾ ಬಯಲು;
ಹಸುರಿನ ಮಲೆ; ಹಸುರುಕಣಿವೆ;
ಹಸುರು ಸಂಜೆಯೀ ಬಿಸಿಲೂ!

# ಪ್ರಥಮ ಭಾಷೆ ಕನ್ನಡ
## ಘಟಕ ಪರೀಕ್ಷೆ

**ಪದ್ಯ – ೦೬. ಛಲಮನೆ ಮೆರೆವೆಂ** **ಅಂಕಗಳು –೨೦**

**ಅ)ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **೧*೨=೨**

೧. ನಿಮಗೆ ನಮಸ್ಕರಿಸಿ ಹೋಗಲು ಬಂದೆನಷ್ಟೇ ಎಂದು ದುರ್ಯೋಧನ ಯಾರಿಗೆ ಹೇಳುವನು?

೨. ಅಂತಕಾತ್ಮಜ ಎಂದರೆ ಯಾರು?

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **೨*೨=೪**

೩. ತಾನು ಹೋರಾಡುತ್ತಿರುವುದು ನೆಲಕ್ಕಲ್ಲ ಛಲಕ್ಕೆ ಎಂಬುದನ್ನು ದುರ್ಯೋಧನ ಹೇಗೆ ವಿವರಿಸುತ್ತಾನೆ?

೪. ಪಾರ್ಥ–ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವೇನು?

**ಇ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.** **೩*೧=೩**

೫. "ಪಾಂಡವರೊಳಿಜಿದು ಛಲಮನೆ ಮೆರೆವೆಂ."

**ಈ) ಕೆಳಗಿನ ಕವಿಯ ಸ್ಥಳ, ಕಾಲ, ಕೃತಿ, ಬಿರುದುಗಳನ್ನು ಕುರಿತು ಬರೆಯಿರಿ** **೩*೧=೩**

೬. ರನ್ನ

**ಉ) ಕೆಳಗಿನ ಪದ್ಯವನ್ನು ಪೂರ್ಣಗೊಳಿಸಿ ಬರೆಯಿರಿ** **೪*೧=೪**

**೭.** ನೆಲಕಿಜಿವೆನೆಂದು ಬಗೆದಿರೆ__________

______________________________

______________________________

___________________ಪುದುವಾಟ್ದಿಪೆನೇ

**ಊ) ಈ ಕೆಳಗಿನ ಪ್ರಶ್ನೆಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **೪*೧=೪**

೮. ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.

# ಪ್ರಥಮ ಭಾಷೆ ಕನ್ನಡ
# ಘಟಕ ಪರೀಕ್ಷೆ

**ಪದ್ಯ – ೦೭. ವೀರಲವ** **ಅಂಕಗಳು –೨೦**

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **೧*೨=೨**

೧. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು?

೨. ಮುನಿಸುತರು ಹೆದರಲು ಕಾರಣವೇನು?

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **೨*೨=೪**

೩. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.

೪. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?

**ಇ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.** **೩*೧=೩**

೫. "ರಘೂದ್ವಹನ ಸೊಲ್ಗೇಳಿ ನಮಿಸಲ್"

**ಈ) ಕೆಳಗಿನ ಕವಿಯ ಸ್ಥಳ, ಕಾಲ, ಕೃತಿ, ಬಿರುದುಗಳನ್ನು ಕುರಿತು ಬರೆಯಿರಿ** **೩*೧=೩**

೬. ಲಕ್ಷ್ಮೀಶ

**ಉ) ಕೆಳಗಿನ ಪದ್ಯವನ್ನು ಪೂರ್ಣಗೊಳಿಸಿ ಬರೆಯಿರಿ** **೪*೧=೪**

**೭.** ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ

______________________________

________________________________________

______________________________

______________________________

ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು.

**ಊ) ಈ ಕೆಳಗಿನ ಪ್ರಶ್ನೆಗೆಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **೪*೧=೪**

**೮.** ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು?

# ಪ್ರಥಮ ಭಾಷೆ ಕನ್ನಡ
## ಘಟಕ ಪರೀಕ್ಷೆ

**ಪದ್ಯ – ೦೮. ಕೆಮ್ಮನೆ ಮೀಸೆವೊತ್ತನೆ** **ಅಂಕಗಳು –೨೦**

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **೧*೨=೨**

೧. ದ್ರೋಣನು ಪರಶುರಾಮರಲ್ಲಿಗೆ ಏಕೆ ಬಂದನು?

೨. ಪರುಶುರಾಮರು ದ್ರೋಣರಿಗೆ ಯಾವುದರಲ್ಲಿ ಅರ್ಘ್ಯವನ್ನು ಕೊಟ್ಟರು?

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **೨*೨=೪**

೩. ದ್ರುಪದನು ದ್ರೋಣರಿಗೆ ಗರ್ವದಿಂದ ಹೇಳಿದ ಮಾತುಗಳು ಯಾವುವು?

೪. ದ್ರೋಣನು ಶಪಥ ಮಾಡುವಾಗ ಹೇಳಿದ ಮಾತುಗಳಾವುವು?

**ಇ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.** **೩*೧=೩**

೫. "ವಿದ್ಯಾಧನಮೆ ಧನಮಪ್ಪುದು"

**ಈ) ಕೆಳಗಿನ ಕವಿಯ ಸ್ಥಳ, ಕಾಲ, ಕೃತಿ, ಬಿರುದುಗಳನ್ನು ಕುರಿತು ಬರೆಯಿರಿ** **೩*೧=೩**

೬. ಪಂಪ

**ಉ) ಕೆಳಗಿನ ಪದ್ಯವನ್ನು ಪೂರ್ಣಗೊಳಿಸಿ ಬರೆಯಿರಿ** **೪*೧=೪**

೭. ಅಂತೆಂಬನಾರ್ಗೆ________________________

____________________________________

____________________________________

___________________________________ನುಡಿದಂ

**ಊ) ಈ ಕೆಳಗಿನ ಪ್ರಶ್ನೆಗೆಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **೪*೧=೪**

೮. ದ್ರೋಣನೂ ದ್ರುಪದನ ವಿರುದ್ಧ ಶಪಥ ಮಾಡಲು ಕಾರಣವಾದ ಅಂಶಗಳನ್ನು ವಿವರಿಸಿ?

## ವ್ಯಾಕರಣ ಘಟಕ ಪರೀಕ್ಷೆ – ೧

**ತರಗತಿ – ೧೦ನೇ** **ಗರಿಷ್ಠ ಅಂಕಗಳು – ೨೦**

**ವರ್ಣಮಾಲೆಗಳು, ಗುಣಿತಾಕ್ಷರಗಳು, ಸಂಯುಕ್ತಾಕ್ಷರಗಳು. ವಿಭಕ್ತಿ ಪ್ರತ್ಯಯಗಳು.**

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

**೧) ಕನ್ನಡ ವರ್ಣಮಾಲೆಯಲ್ಲಿನ ಸ್ವರಗಳು :**
ಎ) ೧೩ ಬಿ) ೯ ಸಿ) ೩೪ ಡಿ) ೨

**೨) ಕನ್ನಡ ವರ್ಣಮಾಲೆಯಲ್ಲಿ ಒಂದು ಮಾತ್ರಾಕಾಲದಲ್ಲಿ ಉಚ್ಚರಿಸುವ ಸ್ವರಾಕ್ಷರಗಳು :**
ಎ) ದೀರ್ಘಸ್ವರ ಬಿ) ಹ್ರಸ್ವಸ್ವರ ಸಿ) ಪ್ಲುತಸ್ವರ ಡಿ) ಸುಸ್ವರ

**೩) ತ–ವರ್ಗದ ಅನುನಾಸಿಕ ಅಕ್ಷರ :**
ಎ) ಣ ಬಿ) ನ ಸಿ) ಮ ಡಿ) ಜ

**೪) ಫ, ಛ – ಇವುಗಳು :**
ಎ) ಅಲ್ಪಪ್ರಾಣಗಳು ಬಿ) ಅನುನಾಸಿಕಗಳು ಸಿ) ಮಹಾಪ್ರಾಣಗಳು ಡಿ) ಅವರ್ಗೀಯ ವ್ಯಂಜನಾಕ್ಷರಗಳು

**೫) ಒಂದು ವ್ಯಂಜನಕ್ಕೆ ಒಂದು ಸ್ವರ ಸೇರಿ ಆಗುವ ಅಕ್ಷರ :**
ಎ) ಒತ್ತಕ್ಷರ ಬಿ) ಗುಣಿತಾಕ್ಷರ ಸಿ) ದೀರ್ಘಸ್ವರ ಡಿ) ಹ್ರಸ್ವಸ್ವರ

**೬) ಲೋಕದೊಳ್ ಎಂಬುದು ಈ ವಿಭಕ್ತಿಯಲ್ಲಿದೆ.**
(ಎ) ಪ್ರಥಮಾ (ಬಿ) ತೃತೀಯಾ (ಸಿ) ಪಂಚಮಿ (ಡಿ) ಸಪ್ತಮಿ

**೭) ತೃತೀಯಾ ವಿಭಕ್ತಿ ಕಾರಕಾರ್ಥ :**
(ಎ) ಕರ್ತೃ (ಬಿ) ಸಂಪ್ರಧಾನ (ಸಿ) ಕರ್ಮ (ಡಿ) ಕರಣ

**೮) ರಾತ್ರಿಯೊಳ್ –ಪದದ ವಿಭಕ್ತಿ ಹೆಸರು :**
(ಎ) ಪಂಚಮಿ (ಬಿ) ಸಪ್ತಮಿ (ಸಿ) ಚತುರ್ಥಿ (ಡಿ) ದ್ವಿತೀಯ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದಗಳನ್ನು ಬರೆಯಿರಿ.**

೯) ಸ್ವರಗಳು : ೧೩ : : ಯೋಗವಾಹಗಳು : ____________
೧೦) ಮ : ಬವರ್ಗ : : ಜ : ______________
೧೧) ಕ, ದ, ಬ : ಅಲ್ಪಪ್ರಾಣ : : ಘ, ಢ, ಥ : ______________
೧೨) ಮನೆಯನ್ನು : ದ್ವಿತೀಯ : : ಮರದಲ್ಲಿ : ____________
೧೩) ಙ, ಜ, ನ, ಣ, ಮ : ಅನುನಾಸಿಕಗಳು : : ಯ, ರ, ಲ, ವ : __________
೧೪) ವರ್ಗೀಯ ವ್ಯಂಜನಾಕ್ಷರಗಳು : ೨೫ : : ಅವರ್ಗೀಯ ವ್ಯಂಜನಾಕ್ಷರಗಳು : ______
೧೫) ಆ, ಈ, ಊ : ದೀರ್ಘಸ್ವರಗಳು : : ಅ, ಇ, ಉ, ಋ : ___________
೧೬) ಒಳ್ : ಸಪ್ತಮಿ : : ಅತ್ತಣಿಂ : __________________
೧೭) ಪ್ರಥಮ : ಕರ್ತೃಕಾರಕ : : ಷಷ್ಠಿ : _________________
೧೮) ಅಪ್ಪ : ಸಜಾತಿಯ ಸಂಯುಕ್ತಾಕ್ಷರ : : ಅಸ್ತ್ರ : _______________________
೧೯) ದೀರ್ಘಸ್ವರಗಳು : ದ್ವಿಮಾತ್ರ : : ಹ್ರಸ್ವ ಸ್ವರಗಳು : ______________________
೨೦) ಕ್, ಗ್ : ಅಲ್ಪಪ್ರಾಣಾಕ್ಷರಗಳು : : ಛ್, ಝ್ : ___________________

## ವ್ಯಾಕರಣ ಘಟಕ ಪರೀಕ್ಷೆ – ೨

**ತರಗತಿ – ೧೦ನೇ** **ಗರಿಷ್ಠ ಅಂಕಗಳು – ೨೦**

### ಸಂಧಿಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

**೧) ಹೊಸಗನ್ನಡ ಪದವು ಈ ಸಂಧಿಗೆ ಉದಾಹರಣೆ :**
(ಎ) ಲೋಪ (ಬಿ) ಆಗಮ (ಸಿ) ಆದೇಶ (ಡಿ) ಗುಣಸಂಧಿ

**೨) ಸನ್ಮಾನ–ಪದವು ಈ ಸಂಧಿಗೆ ಉದಾಹರಣೆ :**
(ಎ) ಅನುನಾಸಿಕಸಂಧಿ (ಬಿ) ಆಗಮಸಂಧಿ (ಸಿ) ಜಶ್ತ್ವಸಂಧಿ (ಡಿ) ಸವರ್ಣದೀರ್ಘಸಂಧಿ

**೩) ಈ ಕೆಳಗಿನ ಪದಗಳಲ್ಲಿ ಗುಣಸಂಧಿಯಾಗಿರುವ ಪದ :**
(ಎ) ಏಕೈಕ (ಬಿ) ಮದೋನ್ಮತ್ತ (ಸಿ) ಅತ್ಯವಸರ (ಡಿ) ದಿಗಂತ

**೪) ಸವರ್ಣದೀರ್ಘಸಂಧಿ ಪದ :**
(ಎ) ದ್ರವ್ಯಾರ್ಥಿ (ಬಿ) ವಾಗ್ದೇವಿ (ಸಿ) ಮಳೆಗಾಲ (ಡಿ) ಬಲ್ಲೆನೆಂದು

**೫) ಪೊಳ್ದಡೆ – ಪದವು ಈ ಸಂಧಿಗೆ ಉದಾಹರಣೆಯಾಗಿದೆ :**
(ಎ) ಅನುನಾಸಿಕಸಂಧಿ (ಬಿ) ಆಗಮಸಂಧಿ (ಸಿ) ಲೋಪಸಂಧಿ (ಡಿ) ಗುಣಸಂಧಿ

**೬) ಇವುಗಳಲ್ಲಿ ಕನ್ನಡ ಸಂಧಿ :**
(ಎ) ಅನುನಾಸಿಕಸಂಧಿ (ಬಿ) ಸವರ್ಣ ದೀರ್ಘಸಂಧಿ (ಸಿ) ಲೋಪಸಂಧಿ (ಡಿ) ಗುಣಸಂಧಿ

**೭) ಕನ್ನಡದ ವ್ಯಂಜನ ಸಂಧಿ :**
(ಎ) ಲೋಪ ಸಂಧಿ (ಬಿ) ಆಗಮಸಂಧಿ (ಸಿ) ಆದೇಶ ಸಂಧಿ (ಡಿ) ಸವರ್ಣದೀರ್ಘಸಂಧಿ

**೮) ಇವುಗಳಲ್ಲಿ ಸಂಸ್ಕೃತ ಸಂಧಿ :**
(ಎ) ಆಗಮ ಸಂಧಿ (ಬಿ) ಸವರ್ಣ ದೀರ್ಘಸಂಧಿ (ಸಿ) ಲೋಪಸಂಧಿ (ಡಿ) ಆದೇಶ ಸಂಧಿ

**೯) ಕಲ್ಗುಡಿ – ಪದವು ಈ ಸಂಧಿಗೆ ಉದಾಹರಣೆಯಾಗಿದೆ :**
(ಎ) ಜಶ್ತ್ವಸಂಧಿ (ಬಿ) ಯಣ್ ಸಂಧಿ (ಸಿ) ಲೋಪಸಂಧಿ (ಡಿ) ಆದೇಶ ಸಂಧಿ

**೧೦) ಯಣ್ ಸಂಧಿಯ ಪದ :**
(ಎ) ತನ್ಮಯ (ಬಿ) ಅತ್ಯಾದರ (ಸಿ) ಪಯಶ್ಯಯನ (ಡಿ) ವಾಚನಾಲಯ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧ ಹೊಂದುವ ಪದಗಳನ್ನು ಬರೆಯಿರಿ.**

೧೧) ಮಹರ್ಷಿ : ಗುಣಸಂಧಿ :: ಷಡಾನನ : ________
೧೨) ಒಮ್ಮೊಮ್ಮೆ : ಲೋಪಸಂಧಿ :: ಹೊಸಗಾಲ : ________
೧೩) ಬೇಧವಿಲ್ಲ : ಆಗಮಸಂಧಿ :: ನಿಮ್ಮಡಿಗಳಲಿ : ________
೧೪) ಅಜಂತ : ಜಶ್ತ್ವಸಂಧಿ :: ಅತ್ಯವಸರ : ________
೧೫) ಲೇಖನವನೋದಿ: ಲೇಖನವನು + ಓದಿ :: ವಾಗ್ದೇವಿ : ________
೧೬) ಶರಚ್ಚಂದ್ರ : ಶ್ಚುತ್ವಸಂಧಿ :: ದಿಗಂತ : ________
೧೭) ಲೋಪಸಂಧಿ : ಸ್ವರಸಂಧಿ :: ಆದೇಶ ಸಂಧಿ : ________
೧೮) ಬಂದಲ್ಲದೆ : ಲೋಪಸಂಧಿ :: ದೃತಿಗೆಟ್ಟು : ________
೧೯) ನಿಮ್ಮರಸ : ಲೋಪಸಂಧಿ :: ವಲ್ಕಲಾವೃತ : ________
೨೦) ಸವರ್ಣದೀರ್ಘ ಸಂಧಿ : ಸಂಸ್ಕೃತ ಸ್ವರಸಂಧಿ :: ಆಗಮ ಸಂಧಿ : ________

## ವ್ಯಾಕರಣ ಘಟಕ ಪರೀಕ್ಷೆ – ೩

**ತರಗತಿ – ೧೦ನೇ** **ಗರಿಷ್ಠ ಅಂಕಗಳು – ೨೦**

**ದ್ವಿರುಕ್ತಿಗಳು, ಜೋಡುನುಡಿಗಳು, ಅನುಕರಣಾವ್ಯಯಗಳು, ತತ್ಸಮ-ತದ್ಭವ.**

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

**೧) ಈಗೀಗ – ಇದು ಯಾವ ವ್ಯಾಕರಣಾಂಶಕ್ಕೆ ಉದಾಹರಣೆ :**
(ಎ) ಜೋಡುನುಡಿ (ಬಿ) ದ್ವಿರುಕ್ತಿ (ಸಿ) ಅನುಕರಣಾವ್ಯಯ (ಡಿ) ನುಡಿಗಟ್ಟು

**೨) ಈ ಪದಗಳಲ್ಲಿ ದ್ವಿರುಕ್ತಿ ಪದವನ್ನು ಗುರುತಿಸಿ ಬರೆಯಿರಿ :**
(ಎ) ಬೇಗಬೇಗ (ಬಿ) ಸರಸರ (ಸಿ) ಸತಿಪತಿ (ಡಿ) ಹಾಲ್ಜೇನು

**೩) ಅನುಕರಣಾವ್ಯಕ್ಕೆ ಉದಾಹರಣೆ ಉದಾಹರಣೆ :**
(ಎ) ಬಿಳಿಹೊಳೆ (ಬಿ) ದುಂಡುದುಂಡಾದ (ಸಿ) ಸುಡುಸುಡು (ಡಿ) ಧಗಧಗ

**೪) ಜೋಡುನುಡಿಗೆ ಉದಾಹರಣೆ :**
(ಎ) ಸತಿಪತಿ (ಬಿ) ಸರಸರ (ಸಿ) ಊರೂರು (ಡಿ) ಧಗಧಗ

**೫ 'ಅಮೃತ' ಪದದ ತದ್ಭವ ರೂಪ :**
(ಎ) ಜೇನು (ಬಿ) ಅಮರ್ದು (ಸಿ) ಅಮಳ (ಡಿ) ಹಾಲು

**೬) ಬೆನ್ನಬೆನ್ನತ್ತಿ – ಇದು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ :**
(ಎ) ಅನುಕರಣಾವ್ಯಯ (ಬಿ) ದ್ವಿರುಕ್ತಿ (ಸಿ) ಜೋಡುನುಡಿ (ಡಿ) ದಿಗ್ವಾಚಕ

**೭) 'ದೃಷ್ಟಿ' – ಈ ಪದದ ತದ್ಭವ ರೂಪ :**
(ಎ) ದೃಸ್ಟಿ (ಬಿ) ದೂರ (ಸಿ) ಕಣ್ಣು (ಡಿ) ದಿಟ್ಟಿ

**೮) ಅನುಕರಣಾವ್ಯಕ್ಕೆ ಉದಾಹರಣೆ :**
(ಎ) ಟಿಕ್ ಟಿಕ್ (ಬಿ) ಬೇಗಬೇಗ (ಸಿ) ಬಂಧು-ಬಳಗ (ಡಿ) ಮೆಲ್ಲ-ಮೆಲ್ಲನೆ

**೯) 'ತುತ್ತತುದಿ'- ಇದು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ :**
(ಎ) ಅನುಕರಣಾವ್ಯಯ (ಬಿ) ದ್ವಿರುಕ್ತಿ (ಸಿ) ಜೋಡುನುಡಿ (ಡಿ) ದಿಗ್ವಾಚಕ

**೧೦) 'ಕೆನೆಮೊಸರು'- ಇದು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ :**
(ಎ) ಅನುಕರಣಾವ್ಯಯ (ಬಿ) ದ್ವಿರುಕ್ತಿ (ಸಿ) ಜೋಡುನುಡಿ (ಡಿ) ದಿಗ್ವಾಚಕ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧ ಹೊಂದುವ ಪದಗಳನ್ನು ಬರೆಯಿರಿ.**

| | | | | |
|---|---|---|---|---|
| ೧೧) | ನಟ್ಟನಡುವೆ | : ದ್ವಿರುಕ್ತಿ | : : ಕರಿನರೆ | : ____________ |
| ೧೨) | ಕಟ್ಟಕಡೆಗೆ | : ಕಡೆಗೆ ಕಡೆಗೆ | : : ಮೊತ್ತಮೊದಲು | : ____________ |
| ೧೩) | ನಮೋ ನಮೋ | : ದ್ವಿರುಕ್ತಿ | : : ಧೀರ ಶೂರ | : ____________ |
| ೧೪) | ಕಬ್ಬ | : ಕಾವ್ಯ | : : ಬೇಹಾರಿ | : ____________ |
| ೧೫) | ಯುದ್ಧ | : ಜುದ್ಧ | : : ಪ್ರಸಾದ | : ____________ |
| ೧೬) | ತವಸಿ | : ತಪಸ್ವಿ | : : ಬೇಹಾರಿ | : ____________ |
| ೧೭) | ವಿಜ್ಞಾನ | : ಭಿನ್ನಾಣ | : : ವ್ಯಾಪಾರಿ | : ____________ |
| ೧೮) | ವಂಶ | : ಬಂಚ | : : ಚೀರ | : ____________ |
| ೧೯) | ಕರಿನರೆ | : ಜೋಡುನುಡಿ | : : ಇರುಳಿರುಳು | : ____________ |
| ೨೦) | ಹಾಲ್ಜೇನು | : ಜೋಡುನುಡಿ | : : ಗುಜುಗುಜು | : ____________ |

## ವ್ಯಾಕರಣ ಘಟಕ ಪರೀಕ್ಷೆ – ೪

ತರಗತಿ – ೧೦ನೇ                                         ಗರಿಷ್ಠ ಅಂಕಗಳು – ೨೦

**ಲೇಖನ ಚಿಹ್ನೆಗಳು, ಅವ್ಯಯಗಳು, ಕಾಲಗಳು, ಹೊಸಗನ್ನಡ ರೂಪ.**

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

**೧) ಒಬ್ಬರು ಹೇಳಿದ ಮಾತನ್ನು ಯಥಾವತ್ತಾಗಿ ಬರೆಯುವಾಗ ಬಳಸುವ ಚಿಹ್ನೆ:**
(ಎ) ಅಲ್ಪವಿರಾಮ (ಬಿ) ವಾಕ್ಯವೇಷ್ಟನ (ಸಿ) ಉದ್ಧರಣ (ಡಿ) ಪ್ರಶ್ನಾರ್ಥಕ

**೨) ಅಯ್ಯೋ ! ಹೀಗಾಗ ಬಾರದಿತ್ತು ! ಈ ವಾಕ್ಯದಲ್ಲಿ ಬಳಕೆಯಾಗಿರುವ ಲೇಖನ ಚಿಹ್ನೆ :**
(ಎ) ಭಾವಸೂಚಕ (ಬಿ) ಪೂರ್ಣವಿರಾಮ (ಸಿ) ಆವರಣ (ಡಿ) ಉದ್ಧರಣ

**೩) ಕ್ರಿಯಾರ್ಥಕಾವ್ಯಯವನ್ನು ಸೂಚಿಸುವ ಪದ :**
(ಎ) ಚೆನ್ನಾಗಿ (ಬಿ) ಸಾಕು (ಸಿ) ಮತ್ತು (ಡಿ) ಅಯ್ಯೋ

**೪) ಆತ್ಮಾರ್ಥಕ ಸರ್ವನಾಮ ಪದ :**
(ಎ) ತಾವು (ಬಿ) ಅವರು (ಸಿ) ಆದ್ದರಿಂದ (ಡಿ) ಯಾರು?

**೫) ಹರ್ಷ, ಆಶ್ಚರ್ಯ, ಸಂತೋಷ, ವಿಷಾದ, ದುಃಖ ಮುಂತಾದ ಭಾವನೆಗಳನ್ನು ಸೂಚಿಸುವಾಗ ಪದಗಳ ಮುಂದೆ ಈ ಚಿಹ್ನೆಯನ್ನು ಬಳಸಲಾಗುವುದು.**
(ಎ) ಭಾವಸೂಚಕ (ಬಿ) ಪೂರ್ಣವಿರಾಮ (ಸಿ) ಅಲ್ಪವಿರಾಮ (ಡಿ) ಉದ್ಧರಣ

**೬) ಸಾಮಾನ್ಯವ್ಯಯ ಪದ :**
(ಎ) ನೀನೇ (ಬಿ) ಧಗಧಗ (ಸಿ) ಬೇಗನೆ (ಡಿ) ಆದ್ದರಿಂದ

**೭) ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಈ ಚಿಹ್ನೆಯನ್ನು ಬಳಸಲಾಗುವುದು.**
(ಎ) ಅಲ್ಪವಿರಾಮ (ಬಿ) ಪೂರ್ಣವಿರಾಮ (ಸಿ) ಅರ್ಧವಿರಾಮ (ಡಿ) ಆವರಣ

**೮) ಹುಲಿ ಈಗ ಎಷ್ಟು ಹಸಿದಿರಬಹುದು ಎಂದು ಯೋಚಿಸಿದರು. ಈ ವಾಕ್ಯದಲ್ಲಿ ಬಳಸಬೇಕಾದ ಲೇಖನ ಚಿಹ್ನೆ.**
(ಎ) ಭಾವಸೂಚಕ (ಬಿ) ಪೂರ್ಣವಿರಾಮ (ಸಿ) ಅಲ್ಪವಿರಾಮ (ಡಿ) ಉದ್ಧರಣ

**೯) ಅಬ್ಬಾ – ಎಂಬುದು ಈ ಅವ್ಯಯ :**
(ಎ) ಭಾವಸೂಚಕಾವ್ಯಯ (ಬಿ) ಸಾಮಾನ್ಯಾವ್ಯಯ (ಸಿ) ಅನುಕರಣಾವ್ಯಯ (ಡಿ) ಕ್ರಿಯಾರ್ಥಕಾವ್ಯಯ

**೧೦) ನಡೆವಂತು – ಪದದ ಹೊಸಗನ್ನಡ ರೂಪ.**
(ಎ) ನಡೆಯುವುದು (ಬಿ) ನಡೆ (ಸಿ) ನಡೆಯುವಂತೆ (ಡಿ) ನಡೆಯಲಾರೆ

ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧ ಹೊಂದುವ ಪದಗಳನ್ನು ಬರೆಯಿರಿ.

| | | | |
|---|---|---|---|
| ೧೧) ಚೆನ್ನಾಗಿ | : ಸಾಮಾನ್ಯಾವ್ಯಯ | : : ಸಾಕು | : ________ |
| ೧೨) ತಿನ್ನುತ್ತಾನೆ | : ವರ್ತಮಾನಕಾಲ | : : ತಿಂದನು | : ________ |
| ೧೩) ಬೇಡ | : ಕ್ರಿಯಾರ್ಥಕಾವ್ಯಯ | : : ಆದ್ದರಿಂದ | : ________ |
| ೧೪) ಬಿಡಿಸದಿರ್ದೊಡೆ | : ಬಿಡಿಸದಿದ್ದರೆ | : : ಪಸುರ್ಗೆ | : ________ |
| ೧೫) ಸೈರಿಸದೆ | : ಸಹಿಸಲಾರದೆ | : : ಬರ್ಪುದಕಂ | : ________ |
| ೧೬) ತಿಂದೆನು | : ಭೂತಕಾಲ | : : ತಿನ್ನುವನು | : ________ |
| ೧೭) ಪ್ರಶ್ನಾರ್ಥಕ ಚಿಹ್ನೆ | : ? | : : ವಾಕ್ಯವೇಷ್ಠನ ಚಿಹ್ನೆ | : ________ |
| ೧೮) ಆದ್ದರಿಂದ | : ಸಂಬಂಧಾರ್ಥಕಾವ್ಯಯ | : : ಅವನೇ | : ________ |
| ೧೯) ನಡೆದನು | : ಭೂತಕಾಲ | : : ನಡೆಯುತ್ತಾಳೆ | : ________ |
| ೨೦) ಕೊಲಲ್ಕೆ | : ಕೊಲ್ಲಲಿಕ್ಕೆ | : : ತೊಳಲ್ದು | : ________ |

## ವ್ಯಾಕರಣ ಘಟಕ ಪರೀಕ್ಷೆ – ೫

**ತರಗತಿ – ೧೦ನೇ** **ಗರಿಷ್ಠ ಅಂಕಗಳು – ೨೦**

### ಸಮಾಸಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

**೧) ದ್ವಂದ್ವ ಸಮಾಸದ ಪದವಿದು:**
(ಎ) ಮೋಸಮಾಡು (ಬಿ) ನಡುರಾತ್ರಿ (ಸಿ) ಸೂರ್ಯಚಂದ್ರರು (ಡಿ) ಪೆರ್ಮರ

**೨) ಕರ್ಮಧಾರಯ ಸಮಾಸದ ಪದವಿದು:**
(ಎ) ಮೋಸಮಾಡು (ಬಿ) ನಡುರಾತ್ರಿ (ಸಿ) ಸೂರ್ಯಚಂದ್ರರು (ಡಿ) ಪೆರ್ಮರ

**೩) ಮೆಲ್ವಾತು – ಪದದಲ್ಲಿ ಏರ್ಪಟ್ಟ ಸಮಾಸ:**
(ಎ) ಅಂಶಿ (ಬಿ) ಕರ್ಮಧಾರೆಯ (ಸಿ) ಕ್ರಿಯಾ (ಡಿ) ಗಮಕ ಸಮಾಸ

**೪) ಕ್ರಿಯಾಸಮಾಸ ಸಮಾಸದ ಪದವಿದು:**
(ಎ) ಬಿಲ್ದಿರುವನೇರಿಸಿ (ಬಿ) ತಲೆನೋವು (ಸಿ) ನೇಯ್ದುವಸ್ತ್ರ (ಡಿ) ಪೆರ್ಮಗ

**೫) ನಟ್ಟಡವಿ ಪದದಲ್ಲಿ ಏರ್ಪಟ್ಟ ಸಮಾಸವಿದು :**
(ಎ) ಅಂಶಿ (ಬಿ) ಕರ್ಮಧಾರೆಯ (ಸಿ) ತತ್ಪುರುಷ (ಡಿ) ಬಹುವ್ರೀಹಿ ಸಮಾಸ

**೬) ಬಹುವ್ರೀಹಿ ಸಮಾಸಕ್ಕೆ ಉದಾಹರಣೆ ಪದವಿದು**
(ಎ) ಅಂತಕಾತ್ಮಜ (ಬಿ) ಪಾರ್ಥಭೀಮರ (ಸಿ) ದಿವ್ಯಶರಾಳಿ (ಡಿ) ಕಳ್ಗುಡಿದ

**೭) ದಿವ್ಯಶರಾಳಿ –ಪದ ಈ ಸಮಾಸಕ್ಕೆ ಉದಾಹರಣೆಯಾಗಿದೆ :**
(ಎ) ಕ್ರಿಯಾ (ಬಿ) ಕರ್ಮಧಾರೆಯ (ಸಿ) ತತ್ಪುರುಷ (ಡಿ) ಬಹುವ್ರೀಹಿ

**೮) ಮಹೀಪತಿ –ಪದ ಈ ಸಮಾಸಕ್ಕೆ ಉದಾಹರಣೆಯಾಗಿದೆ :**
(ಎ) ತತ್ಪುರುಷ (ಬಿ) ಕರ್ಮಧಾರಯ (ಸಿ) ಬಹುವ್ರೀಹಿ (ಡಿ) ದ್ವಂದ್ವ

**೯) ಏಕಾಕ್ಷ –ಪದ ಈ ಸಮಾಸಕ್ಕೆ ಉದಾಹರಣೆಯಾಗಿದೆ :**
(ಎ) ಕ್ರಿಯಾ (ಬಿ) ಕರ್ಮಧಾರೆಯ (ಸಿ) ದ್ವಿಗು (ಡಿ) ಬಹುವ್ರೀಹಿ

**೧೦) ಲವಕುಶರು –ಪದ ಈ ಸಮಾಸಕ್ಕೆ ಉದಾಹರಣೆಯಾಗಿದೆ :**
(ಎ) ತತ್ಪುರುಷ (ಬಿ) ಕರ್ಮಧಾರಯ (ಸಿ) ಬಹುವ್ರೀಹಿ (ಡಿ) ದ್ವಂದ್ವ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧ ಹೊಂದುವ ಪದಗಳನ್ನು ಬರೆಯಿರಿ.**

| | | | | |
|---|---|---|---|---|
| ೧೧) | ಹಣೆಗಣ್ಣ | : ಬಹುವ್ರೀಹಿ | :: ಬೆಟ್ಟದಾವರೆ | : ________ |
| ೧೨) | ಬಿಲ್ಲನ್ನು + ಕೊಂಡು :ಬಿಲ್ಗೊಂಡು | | :: ತಲೆಯ + ಮುಂದೆ | : ________ |
| ೧೩) | ನೆಯ್ದುವಸ್ತ್ರ | : ಗಮಕಸಮಾಸ | :: ಸೂರ್ಯಚಂದ್ರರು | : ________ |
| ೧೪) | ನಾಣೆಲಿ | : ಬಹುವ್ರೀಹಿ ಸಮಾಸ | :: ಪೂದೋಟ | : ________ |
| ೧೫) | ಕಳ್ಗುಡಿದ | : ಕ್ರಿಯಾ ಸಮಾಸ | :: ಸಾಕ್ಷಿಮಾಡಿ | : ________ |
| ೧೬) | ದೈವಭಕ್ತಿ | : ತತ್ಪುರುಷ | :: ಅಬ್ಜೋದರ | : ________ |
| ೧೭) | ಹೊಗೆದೋರು | : ಕ್ರಿಯಾಸಮಾಸ | :: ಹೆದ್ದಾರಿ | : ________ |
| ೧೮) | ಸ್ವಾಮಿದ್ರೋಹ | : ತತ್ಪುರುಷ ಸಮಾಸ | :: ಮುಂಗೈ | : ________ |
| ೧೯) | ಸಾಕ್ಷಿಮಾಡು | : ಕ್ರಿಯಾಸಮಾಸ | :: ಸೊಲ್ಗೇಳಿ | : ________ |
| ೨೦) | ಪೂದೋಟ | : ತತ್ಪುರುಷ ಸಮಾಸ | :: ಇನತನೂಜ | : ________ |

## ವ್ಯಾಕರಣ ಘಟಕ ಪರೀಕ್ಷೆ – ೬

**ತರಗತಿ – ೧೦ನೇ** **ಗರಿಷ್ಠ ಅಂಕಗಳು – ೨೦**

### ನಾಮಪದಗಳು, ಕ್ರಿಯಾಪದಗಳು.

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

**೧) ಅನ್ವರ್ಥನಾಮ ಪದಕ್ಕೆ ಉದಾಹರಣೆ :**
(ಎ) ಮನುಷ್ಯ (ಬಿ) ವ್ಯಾಪಾರಿ (ಸಿ) ಸಹದೇವ (ಡಿ) ತಮಗೆ

**೨) ಕ್ರಿಯಾಪದದ ಮೂಲ ರೂಪ:**
(ಎ) ಕೃದಂತ (ಬಿ) ವಿಭಕ್ತಿ (ಸಿ) ನಾಮಪ್ರಕೃತಿ (ಡಿ) ಧಾತು

**೩) ನಿಷೇಧಾರ್ಥಕ ರೂಪದ ಕ್ರಿಯಾಪದ :**
(ಎ) ಓದರು (ಬಿ) ಓದಲಿ (ಸಿ) ಓದಿಯಾರು (ಡಿ) ಓದುವನು

**೪) ಕೆಳಗಿನವುಗಳಲ್ಲಿ ಸಕರ್ಮಕ ಧಾತು :**
(ಎ) ಮಲಗು (ಬಿ) ಬದುಕು (ಸಿ) ಓಡು (ಡಿ) ಕೊಡು

**೫) ಹಾಡು ಧಾತುವಿನ ನಿಷೇಧಾರ್ಥಕ ರೂಪ :**
(ಎ) ಹಾಡನು (ಬಿ) ಹಾಡಲಿ (ಸಿ) ಹಾಡಿಯಾರು (ಡಿ) ಹಾಡಿರಿ

**೬) ಕಟ್ಟಿಯಾರು ಪದದ ವಿಧ್ಯರ್ಥಕ ಬಹುವಚನ ರೂಪ :**
(ಎ) ಕಟ್ಟು (ಬಿ) ಕಟ್ಟಿರಿ (ಸಿ) ಕಟ್ಟರು (ಡಿ) ಕಟ್ಟಿಯಾನು

**೭) ಮುಟ್ಟೋಣ – ಪದದ ಧಾತು :**
(ಎ) ಮುಡಿ (ಬಿ) ಮುಟ್ಟರು (ಸಿ) ಮುಟ್ಟಲಿ (ಡಿ) ಮುಟ್ಟು

**೮) ಬರೆ – ಪದದ ನಿಷೇಧಾರ್ಥಕ ನಪುಂಸಕಲಿಂಗ ರೂಪ :**
(ಎ) ಬರೆಯರು (ಬಿ) ಬರೆದೇನು (ಸಿ) ಬರೆಯದು (ಡಿ) ಬರೆದೀತು

**೯) ಅಂಜಿಕೆ – ಪದದ ಧಾತು :**
(ಎ) ಅಂಜಲಿ (ಬಿ) ಅಂಜಿ (ಸಿ) ಅಂಜು (ಡಿ) ಅಂಜುವುದಿಲ್ಲ

**೧೦) ಬರೆಯಲಿ – ಪದದ ಸಂಭವನಾರ್ಥಕ ರೂಪ :**
(ಎ) ಬರೆಯರು (ಬಿ) ಬರೆಯಳು (ಸಿ) ಬರೆಯದು (ಡಿ) ಬರೆದಾರು

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧಹೊಂದುವ ಪದಗಳನ್ನು ಬರೆಯಿರಿ.**

೧೧) ವಿದ್ವಾಂಸ : ಅನ್ವರ್ಥನಾಮ : : ಮನುಷ್ಯ : ____________
೧೨) ಬರೆಯಲಿ : ವಿಧ್ಯರ್ಥಕ : : ಬರೆದಾರು : ____________
೧೩) ಕಮಲಾಕ್ಷ : ಅಂಕಿತನಾಮ : : ತಾನು : ____________
೧೪) ತಿನ್ನಲಿ : ವಿಧ್ಯರ್ಥಕ : : ಮಾಡನು : ____________
೧೫) ದೊಡ್ಡದು : ಗುಣವಾಚಕ : : ನೋಟ : ____________
೧೬) ನಾನು : ಉತ್ತಮ ಪುರುಷ : : ನೀನು : ____________
೧೭) ನಗೋಣ : ವಿಧ್ಯರ್ಥಕ : : ನಗರು : ____________
೧೮) ವಿದ್ಯಾರ್ಥಿ : ಅನ್ವರ್ಥಕನಾಮ : : ಪರ್ವತ : ____________
೧೯) ಯಾರು : ಪ್ರಶ್ನಾರ್ಥಕ ಸರ್ವನಾಮ :: ತಾನು : ____________
೨೦) ಪಶ್ಚಿಮ : ದಿಗ್ವಾಚಕ : : ಹತ್ತನೇಯ : ____________

## ವ್ಯಾಕರಣ ಘಟಕ ಪರೀಕ್ಷೆ – ೭

ತರಗತಿ – ೧೦ನೇ | ಗರಿಷ್ಠ ಅಂಕಗಳು – ೨೦

### ಛಂದಸ್ಸು

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ. ೧*೩=೦೩

**೧) ಅಕ್ಷರಗಳ ಗಣ ಹೊಂದಿರುವ ಛಂಧಸ್ಸು :**

ಎ) ಕಂದ ಬಿ) ಷಟ್ಪದಿ ಸಿ) ವೃತ್ತಗಳು ಡಿ) ರಗಳೆ

**೨) ಗುರು ಲಘು ಮೊದಲಿರೆ :**

ಎ) ಮನಗಣ ಬಿ) ಭಯಗಣ ಸಿ) ಜರಗಣ ಡಿ) ಸತಗಣ

**೩) ಗುರುವೊಂದಾದಿಯೊಳ್ _______ :**

ಎ) ಉತ್ಪಲಂ ಬಿ) ಚಂಪಕ ಸಿ) ಮತ್ತೇಭ ಡಿ) ಸ್ರಗ್ಧರಾ

ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧ ಹೊಂದುವ ಪದಗಳನ್ನು ಬರೆಯಿರಿ.

೪) ಗುರು ಲಘು ಮೂರಿರೆ : ಮನಗಣ : : ಗುರು ಲಘು ಕೊನೆಯಿರೆ : _________

೫) ಅಕ್ಷರ : ಭಗಣ : : ಬಲ್ಗಯ್ಯ : _________

ಈ ಕೆಳಗಿನ ಪದ್ಯಕ್ಕೆ ಪ್ರಸ್ತಾರ ಹಾಕಿ,ಗಣ ವಿಂಗಡಿಸಿ ಛಂದಸ್ಸು ಹೆಸರಿಸಿ ೩*೫=೧೫

**೬) ಒಡವೆಯನರ್ಥಿಗಿತ್ತೆನವನೀತಳಮಂ ಗುರುಗಿತ್ತೆನೀಗಳೊಂ**

**೭) ನೆಲಕಿಱಿವೆನೆಂದು ಬಗೆದಿರೆ**

**ಚಲಕಿಱಿವೆಂ ಪಾಂಡುಸುತರೊಳೀನೆಲನಿದು ಪಾ**

**೮) ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ**

**ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್**

**ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡಬಡಿವರೆಮ್ಮನೆನಲು**

**೯) ಕೊರಳ ಸೆರೆ ಹಿಗ್ಗಿದವು ದೃಗುಜಲ**

**ಉರವಣಿಸಿ ಕಡು ನೊಂದನಕಟಾ**

**ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ**

**೧೦) ಮೇದಿನಿಯಂ ಕ್ರಮಕ್ರಮದೆ ಪರ್ವಿದುದಾತ್ತನಭೋವಿಭಾಗಮಾ**

## ವ್ಯಾಕರಣ ಘಟಕ ಪರೀಕ್ಷೆ – ೮

ತರಗತಿ – ೧೦ನೇ  ಗರಿಷ್ಠ ಅಂಕಗಳು – ೨೦

### ಅಲಂಕಾರಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

**೧) ನಿರೋಷ್ಠ್ಯ, ತಾಲವ್ಯ, ಏಕಾಕ್ಷರ, ದ್ವ್ಯಕ್ಷರ, ತ್ರ್ಯಕ್ಷರ, ಹಾರಬಂಧ, ಮುರಜಬಂಧ ಇತ್ಯಾದಿ ಪ್ರಕಾರಗಳನ್ನು ಹೊಂದಿರುವ ಅಲಂಕಾರ :**

ಎ) ಯಮಕ ಬಿ) ವೃತ್ತಾನು ಪ್ರಾಸ ಸಿ) ಚಿತ್ರ ಕವಿತ್ವ ಡಿ) ರೂಪಕ

**೨) 'ಮರನೇರಿದ ಮರ್ಕಟನಂತೆ ' – ಈ ವಾಕ್ಯದಲ್ಲಿರುವ ಉಪಮಾನ :**

ಎ) ಮರ ಬಿ) ಮರ್ಕಟ ಸಿ) ಮರನೇರಿದ ಮರ್ಕಟ ಡಿ) ಮನಸ್ಸು

**೩) ಎರಡು ಬೇರೆಬೇರೆ ವಾಕ್ಯಗಳಲ್ಲಿ ಅರ್ಥಸಾದೃಶ್ಯದಿಂದ ಬಿಂಬ ಪ್ರತಿಬಿಂಬ ಭಾವವು ತೋರಿಬಂದರೆ ಅದು**

ಎ) ದೃಷ್ಟಾಂತಾಲಂಕಾರ ಬಿ) ಉಪಮಾಲಂಕಾರ ಸಿ) ಉತ್ಪ್ರೇಕ್ಷಾಲಂಕಾರ ಡಿ) ಯಮಕಾಲಂಕಾರ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧಹೊಂದುವ ಪದಗಳನ್ನು ಬರೆಯಿರಿ.**

೪) ಯಮಕ : ಶಬ್ದಾಲಂಕಾರ : : ರೂಪಕಾಲಂಕಾರ : ____________

೫) ಉಪಮಾನ, ಉಪಮೇಯಗಳಲ್ಲಿ ಭೇದವಿಲ್ಲ : ರೂಪಕ :: ಉಪಮಾನ, ಉಪಮೇಯಗಳಲ್ಲಿ ಹೋಲಿಕೆ:__________

**ಕೆಳಗಿನ ವಾಕ್ಯದಲ್ಲಿನ ಅಲಂಕಾರ ಗುರುತಿಸಿ , ಸಮನ್ವಯಗೊಳಿಸಿ ಬರೆಯಿರಿ** **೩*೫=೧೫**

**೬) "ಮಾರಿಗೌತಣವಾಯ್ತು ನಾಳಿನ ಭಾರತವು"**

**೭) "ಸಿಡಿಲು ಸಿಡಿದ್ಹಾಂಗ ಗುಂಡು ಸುರಿದಾವ"**

**೮) "ಸೀತೆಯಮುಖ ಕಮಲವೋ ಎಂಬಂತೆ ಅರಳಿತು"**

**೯) "ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ"**

**೧೦) "ಆತನು ಪರೀಕ್ಷೆಯಲ್ಲಿ ಪಡೆದು ಉತ್ತೀರ್ಣನಾದನು. ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?"**

# ವ್ಯಾಕರಣ ಘಟಕ ಪರೀಕ್ಷೆ – ೯

**ತರಗತಿ – ೧೦ನೇ** **ಗರಿಷ್ಠ ಅಂಕಗಳು – ೨೦**

## ತದ್ಧಿತಾಂತಗಳು ಮತ್ತು ಕೃದಂತಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

**೧) ವರ್ತಮಾನ ಕೃದಂತನಾಮಕ್ಕೆ ಈ ಪದವು ಉದಾಹರಣೆಯಾಗಿದೆ.**
ಎ) ಬರೆಯುವ ಬಿ) ಬರೆದ ಸಿ) ಬರೆಯದ ಡಿ) ಬರೆಹ

**೨) 'ನೋಟ' ಎಂಬುದು ಈ ವ್ಯಾಕರಣಾಂಶವಾಗಿದೆ.**
ಎ) ಕೃದಂತನಾಮ ಬಿ) ಕೃದಂತಭಾವನಾಮ ಸಿ) ಕೃದಂತಾವ್ಯಯ ಡಿ) ತದ್ಧಿತಾಂತ

**೩) ಇವುಗಳಲ್ಲಿ ಕೃದಂತಾವ್ಯಯಕ್ಕೆ ಉದಾಹರಣೆಯಾದ ಪದ.**
ಎ) ತೊಡುಗೆ ಬಿ) ತಿನ್ನುವಿಕೆ ಸಿ) ನಡೆಯುವ ಡಿ) ಮಾಡಲಿಕ್ಕೆ

**೪) ತದ್ಧಿತಾಂತನಾಮಕ್ಕೆ ಉದಾಹರಣೆ :**
(ಎ) ಬಳೆಗಾರ (ಬಿ) ಸಿರಿತನ (ಸಿ) ಚಂದ್ರನಂತೆ (ಡಿ) ಕಪ್ಪು

**೫) ಇದೊಂದು ಕೃದಂತನಾಮ ಪದ :**
(ಎ) ಓಟ (ಬಿ) ಓಡುವ (ಸಿ) ಮೆರವಣಿಗೆ (ಡಿ) ನೋಡಲು

**೬) ಈ ಕೆಳಗಿನ ಪದಗಳಲ್ಲಿ ತದ್ಧಿತಾಂತ ಭಾವನಾಮಕ್ಕೆ ಉದಾಹರಣೆ :**
(ಎ) ಬಡತನ (ಬಿ) ಮಡಿವಾಳ (ಸಿ) ರಾಧೆಗಿಂತ (ಡಿ) ಬರೆಯುವ

**೭) ತದ್ಧಿತಾಂತ ನಾಮಪದ :**
(ಎ) ವಾಚಾಳಿ (ಬಿ) ಪೆರ್ಮೆ (ಸಿ) ಅಂಜಿಕೆ (ಡಿ) ತಿನ್ನುತ್ತ

**೮) ತದ್ಧಿತಾಂತ ಅವ್ಯಕ್ಕೆ ಉದಾಹರಣೆಯಾಗಿದೆ :**
(ಎ) ಮಾಲೆಗಾರ್ತಿ (ಬಿ) ನೋಟ (ಸಿ) ಶಾಲೆಯವರೆಗೆ (ಡಿ) ಜಾಣತನ

**೯) ತದ್ಧಿತಾಂತ ಅವ್ಯಕ್ಕೆ ಉದಾಹರಣೆಯಾಗಿದೆ :**
(ಎ) ಸಾಲಗಾರ (ಬಿ) ನೋಟ (ಸಿ) ನನಗೋಸ್ಕರ (ಡಿ) ಚೆಲುವಿಕೆ

**೧೦) ಕೃದಂತ ಭಾವನಾಮಕ್ಕೆ ಉದಾಹರಣೆಯಾಗಿದೆ :**
(ಎ) ಕಲೆಗಾರ (ಬಿ) ನಂಬಿಕೆ (ಸಿ) ಮಾಡಿದ (ಡಿ) ಮಾಡಲಿಕ್ಕೆ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದಗಳನ್ನು ಬರೆಯಿರಿ.**

| | | | | | |
|---|---|---|---|---|---|
| ೧೧) | ನಡೆಯುತ್ತ | : ಕೃದಂತಾವ್ಯಯ | :: ಪಟ್ಟಣದವರೆಗೆ | : | ____________ |
| ೧೨) | ಓಡು | : ಓಟ | :: ನೆನೆ | : | ____________ |
| ೧೩) | ಬಳೆಗಾರ | : ಬಳೆಗಾರ್ತಿ | :: ಒಕ್ಕಲಿಗ | : | ____________ |
| ೧೪) | ಅಂಜಿಕೆ | : ಕೃದಂತ ಭಾವನಾಮ | :: ಜಾಣ್ಮೆ | : | ____________ |
| ೧೫) | ಇಕೆ, ಇಗೆ | : ಕೃದಂತ ಭಾವನಾಮ | :: ಅಲು, ಅಲಿಕ್ಕೆ | : | ____________ |
| ೧೬) | ಕೊರೆದ | : ಕೃದಂತನಾಮ | :: ಕೊರೆತ | : | ____________ |
| ೧೭) | ಪೆರ್ಮೆ | : ತದ್ಧಿತಾಂತ ಭಾವನಾಮ | :: ಅವನವೋಲ್ | : | ____________ |
| ೧೮) | ನೆನಪು | : ಕೃದಂತಭಾವನಾಮ | :: ಹಿರಿಮೆ | : | ____________ |
| ೧೯) | ಸಿರಿತನ | : ತದ್ಧಿತಾಂತ ಭಾವನಾಮ | :: ಮಾಟ | : | ____________ |
| ೨೦) | ಅದಕ್ಕಿಂತ | : ತದ್ಧಿತಾಂತ ಅವ್ಯಯ | :: ತಿನ್ನುವ | : | ____________ |

## ವ್ಯಾಕರಣ ಘಟಕ ಪರೀಕ್ಷೆ – ೧೦

**ತರಗತಿ – ೧೦ನೇ** **ಗರಿಷ್ಠ ಅಂಕಗಳು – ೨೦**

**ಅನ್ಯದೇಶಿಯ ಪದಗಳು, ಗ್ರಾಂಥಿಕ ರೂಪ, ವಾಕ್ಯಪ್ರಕಾರಗಳು, ಪದಗಳ ಅರ್ಥ.**

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

**೧) ಪರ್ಶಿಯನ್ ಭಾಷೆಯ ಪದ :**
(ಎ) ಕಾಗದ (ಬಿ) ಅಮಾನತು (ಸಿ) ಅನಾನಸು (ಡಿ) ದಿವಾನ

**೨) ಅಜಮಾಯಿಸಿ ಇದು ಯಾವ ಭಾಷೆಯಿಂದ ಕನ್ನಡಕ್ಕೆ ಬಂದಿದೆ?**
(ಎ) ಪೋರ್ಚ್‌ಗೀಸ್ (ಬಿ) ಪರ್ಶಿಯನ್ (ಸಿ) ಅರಬ್ಬಿ (ಡಿ) ಗ್ರೀಕ್

**೩) ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ**
(ಎ) ಸಾಮಾನ್ಯವಾಕ್ಯ (ಬಿ) ಸಂಯೋಜಿತ ವಾಕ್ಯ (ಸಿ) ಮಿಶ್ರವಾಕ್ಯ (ಡಿ) ನಿಗಧಿತ ವಾಕ್ಯ

**೪) ಕಳುವ್ಯಾರೆ ಪದದ ಗ್ರಾಂಥಿಕ ರೂಪ :**
(ಎ) ಕಳವುಮಾಡಿದರು (ಬಿ) ಕಳುಹಿಸಿದ್ದಾರೆ (ಸಿ) ಕಳೆದುಹೋಗಿದೆ (ಡಿ) ಕಳೆದಿದ್ದಾರೆ

**೫) ವೀರೇಶ್ವರ ಪಾಠಕ್ ರನ್ನು ಬೆಂಗಳೂರಿಗೆ ವರ್ಗಾವಣೆ ಮಾಡಲಾಯಿತು– ಇದು**
(ಎ) ಸಾಮಾನ್ಯವಾಕ್ಯ (ಬಿ) ಸಂಯೋಜಿತ ವಾಕ್ಯ (ಸಿ) ಮಿಶ್ರವಾಕ್ಯ (ಡಿ) ಸಂಬಂಧಿತ ವಾಕ್ಯ

**೯) ಅರ್ತಿ –ಪದದ ಅರ್ಥ :**
(ಎ) ಅದಿವಿ (ಬಿ) ಪ್ರೀತಿ (ಸಿ) ಐತಿ (ಡಿ) ಆರತಿ

**೧೦) ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ**
(ಎ) ಸಾಮಾನ್ಯವಾಕ್ಯ (ಬಿ) ನಿರ್ಬಂಧಿತ ವಾಕ್ಯ (ಸಿ) ಮಿಶ್ರವಾಕ್ಯ (ಡಿ) ಸಂಯೋಜಿತ ವಾಕ್ಯ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧ ಹೊಂದುವ ಪದಗಳನ್ನು ಬರೆಯಿರಿ.**

೧೧) ದಾಖಲೆ : ಉರ್ದು :: ಅನಾನಸು : ____________
೧೨) ಇಲ್ಲದ್ದಂಗ : ಇಲ್ಲದಹಾಗೆ :: ಇಸವಾಸ : ____________
೧೩) ಉಪಾಸನೆ : ಪೂಜೆ :: ವಾಜಿ : ____________
೧೪) ವಿಲಾತಿ : ವಿಲಾಯಿತಿ :: ಆರ್ತತೆ : ____________
೧೫) ಅನೃತ : ಸುಳ್ಳು : : ಕೃತ್ರಿಮ : ____________
೧೯) ಪೊಳಲ್ : ಪಟ್ಟಣ : : ಕಸವರ : ____________
೨೦) ತನುಜ : ಮಗ : : ಸಖ : ____________